ಸೆಪ್ಟೆಂಬರ್ 16, 2004

## ಎಲ್ಲ ವರ್ಗದ ನಾಣ್ಯಗಳು; ಚಲಾವಣಾ ಯೋಗ್ಯನಾಣ್ಯಗಳು – ಆರ್‌ಬಿಐ

ಭಾರತೀಯ ರಿಸರ್ವ್ ಬ್ಯಾಂಕಿಗೆ ಬಂದ ವರದಿಗಳು ಹಾಗೂ ದೂರುಗಳ ಪ್ರಕಾರ ಅಂಗಡಿಕಾರರು, ವ್ಯಾಪಾರಿಗಳು, ಸಾರಿಗೆ ಸಂಸ್ಥೆಗಳು, ಸರ್ಕಾರಿ ಇಲಾಖೆಗಳು ಮುಂತಾದವರು 25 ಪೈಸೆ ಹಾಗೂ 50 ಪೈಸೆ ನಾಣ್ಯಗಳು ಚಲಾವಣೆಯಲ್ಲಿರುವ ಹಣವಲ್ಲ ಅಥವಾ ಬ್ಯಾಂಕ್ ಶಾಖೆಗಳಲ್ಲಿ ಅವುಗಳನ್ನು ಸ್ವೀಕರಿಸುವುದಿಲ್ಲ ಎಂದು ಕಾರಣ ಹೇಳಿ ಅವುಗಳನ್ನು ನಿರಾಕರಿಸುತ್ತಿದ್ದಾರೆ.

ಸಾರ್ವಜನಿಕರ ಮಾಹಿತಿಗಾಗಿ ಹೇಳುವುದಾದರೆ 25 ಪೈಸೆ ಹಾಗೂ 50 ಪೈಸೆ ಸೇರಿದಂತೆ ಎಲ್ಲ ನಾಣ್ಯಗಳು ಚಲಾವಣೆಯಲ್ಲಿರುವ ಹಣವಾಗಿದ್ದು ಹಾಗೆಯೇ ಮುಂದುವರಿಯುತ್ತವೆ. ಹೀಗಾಗಿ ಅಂಥ ನಾಣ್ಯಗಳನ್ನು ಸ್ವೀಕರಿಸುವಲ್ಲಿ ನಿರಾಸಕ್ತಿ ತೋರಿಸುವುದು ಸರಿಯಲ್ಲ. ರಿಸರ್ವ್ ಬ್ಯಾಂಕು ಎಲ್ಲ ವಾಣಿಜ್ಯ ಬ್ಯಾಂಕುಗಳಿಗೆ ಎಲ್ಲ ನಾಣ್ಯಗಳನ್ನು ಮುಕ್ತವಾಗಿ ಸ್ವೀಕರಿಸಿ ಬ್ಯಾಂಕು ನೋಟುಗಳನ್ನು ವಿನಿಮಯ ರೂಪದಲ್ಲಿ ನೀಡಬೇಕೆಂದು ಸಲಹೆ ನೀಡಿದೆ. ರಿಸರ್ವ್ ಬ್ಯಾಂಕ್ ಕಚೇರಿಗಳಲ್ಲೂ ಎಲ್ಲ ನಾಣ್ಯಗಳನ್ನು ಸ್ವೀಕರಿಸಿ ವಿನಿಮಯ ರೂಪದಲ್ಲಿ ಬ್ಯಾಂಕ್ ನೋಟುಗಳನ್ನು ನೀಡವುದನ್ನು ಮುಂದುವರಿಸಿದೆ.

ಭಾರತೀಯ ರಿಸರ್ವ್ ಬ್ಯಾಂಕು 25 ಪೈಸೆ ಹಾಗೂ 50 ಪೈಸೆ ಮೌಲ್ಯದ ನಾಣ್ಯಗಳನ್ನು ಚಲಾವಣೆಯಿಂದ ಹಿಂತೆಗೆದುಕೊಂಡಿದೆ ಎಂಬ ವದಂತಿಗಳನ್ನು ಸಾರ್ವಜನಿಕರು ನಂಬಬಾರದು. 25 ಪೈಸೆ ಹಾಗೂ 50 ಪೈಸೆ ಮೌಲ್ಯದ ನಾಣ್ಯಗಳು ಚಲಾವಣೆಯಲ್ಲಿರುವ ಹಣವಾಗಿದ್ದು, ಅವು ಹಾಗೆಯೇ ಮುಂದುವರಿಯುತ್ತವೆ.

ಪಿ.ವಿ. ಸದಾನಂದನ್
ವ್ಯವಸ್ಥಾಪಕರು

ಪತ್ರಿಕಾ ಪ್ರಕಟಣೆ ಸಂ.: 2004–2005/307